[redacted]



# ಕಾರಿನಲ್ಲಿ ಸಾಗಿಸುತ್ತಿದ್ದ 1.55000 ಲಕ್ಷ ಹಣ ವಶಕ್ಕೆ



ಯರಗಟ್ಟಿ : ದಾಖಲೆ ಇಲ್ಲದೆ ಸಾಗಿಸುತ್ತಿದ್ದ ಹಣವನ್ನು ಚುನಾವಣಾಧಿಕಾರಿಗಳು ಸೀಜ್ ಮಾಡಿರುವ ಘಟನೆ ಯರಗಟ್ಟಿ ಪಟ್ಟಣದ ಚೆಕ್ ಪೋಸ್ಟ್ ಬಳಿ ನಡೆದಿದೆ. ವಿಜಯಪುರ ದಿಂದ ಬೆಳಗಾವಿ ಬರುತ್ತಿದ್ದ ಕಾರಿನಲ್ಲಿ ಹಣ ಪತ್ತೆಯಾಗಿದ್ದು, ಕಾರಿನಲ್ಲಿ ಇಬ್ಬರು ಇದ್ದರೆಂದು ತಿಳಿದುಬಂದಿದೆ.ಬ್ಯಾಗ್‌ನಲ್ಲಿದ್ದ ಸುಮಾರು 1.55000 ಲಕ್ಷ ಹಣ ವಶಕ್ಕೆ ಪಡೆಯಲಾಗಿದೆ. ಯರಗಟ್ಟಿ ಉಪ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಈ ವೇಳೆ ಎಫ್ ಎಸ್ ಟಿ ಅಧಿಕಾರಿ ಎಫ್. ಎಂ. ಹವಾಲ್ದಾರ್, ಪಿಎಸ್ ಆಯ್. ಎಂ. ಹಿರೇಗೌಡರ, ಎಎಸ್ ವಾಯ್ ಎಂ ಕಡಕೋಳ, ಚೆಕ್ ಪೋಸ್ಟ್ ಅಧಿಕಾರಿಗಳಾದ ಶ್ರೀಶೈಲಗೌಡ ನೀಲನಗೌಡ, ಸತೀಶ ಬಡಿಗೇರ, ಎಂ. ಎಸ್. ಹೊಂಗಲ ಇದ್ದರು.

# ಪಿಯುಸಿ : ವಿಜಯಲಕ್ಷ್ಮಿ ಗುಲಗಂಜಿ ರಾಜ್ಯಕ್ಕೆ 5ನೇ ಸ್ಥಾನ



ಸವದತ್ತಿ : ಇಲ್ಲಿನ ಕುಮಾರೇಶ್ವರ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ಪಟ್ಟದಕಲ್ಲ ಓಣಿಯ ನಿವಾಸಿ ಕುಮಾರಿ ವಿಜಯಲಕ್ಷ್ಮಿ ಕೊಟ್ರೆಪ್ಪ ಗುಲಗಂಜಿ ಪಿಯು ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ 592 (ಶೇ 98.66%)ರಷ್ಟು ಅಂಕ ಗಳಿಸುವ ಮೂಲಕ ರಾಜ್ಯಕ್ಕೆ 5ನೇ ಸ್ಥಾನ ಪಡೆದಿದ್ದಾರೆ.ಕನ್ನಡ ಭೂಗೋಳಶಾಸ್ತ್ರ ಶಿಕ್ಷಣ ಶಾಸ್ತ್ರ ವಿಷಯಗಳಲ್ಲಿ ನೂರಕ್ಕೆ ನೂರು ಅಂಕ ಪಡೆದಿರುತ್ತಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ವಿದ್ಯಾರ್ಥಿ, ನನ್ನ ಸಾಧನೆಗೆ ನನ್ನ ಶಿಕ್ಷಕರ ಪ್ರೋತ್ಸಾಹವೇ ಕಾರಣ. ಅವರ ಪ್ರೋತ್ಸಾಹದಿಂದ ಇಂದು ಈ ಸಾಧನೆ ಮಾಡಿದ್ದೇನೆ. ಮುಂದೆ ಐಎಎಸ್ ಮಾಡಿ ಸಮಾಜಕ್ಕೆ ಒಳ್ಳೆಯ ಸೇವೆಯನ್ನು ಕೊಡುವುದರ ಜೊತೆಗೆ ಮಾದರಿ ಅಧಿಕಾರಿಯಾಗುವ ಆಸೆ ಹೊಂದಿದ್ದೇನೆ ಎಂದಿದ್ದಾರೆ.ತಂದೆ ತಾಯಿ ಒಕ್ಕೂಲುತನ ಬಡತನದ ನಡುವೆಯೂ ಬಹಳಷ್ಟು ಕಷ್ಟಪಟ್ಟು ಅಧ್ಯಯನ ಮಾಡಿ ಸಾಧನೆ ಮಾಡಿರುವುದು ಹೆಮ್ಮೆಪಡುವ ಸಂಗತಿಯಾಗಿದೆ. ತಂದೆ ತಾಯಿ, ಶಿಕ್ಷಕರು ಹರ್ಷ ವ್ಯಕ್ತಪಡಿಸಿದ್ದಾರೆ

## ಕೋಟಾ ಶ್ರೀನಿವಾಸ ಪೂಜಾರಿ ಚುನಾವಣಾ ಖರ್ಚಿಗೆ ತಾಲೂಕು ಕಾಂಗ್ರೆಸ್ ಅಧ್ಯಕ್ಷರಿಂದ ಧನಸಹಾಯ

ಚಿಕ್ಕಮಗಳೂರು: ರಾಜ್ಯಾದ್ಯಂತ ಲೋಕಸಭಾ ಚುನಾವಣಾ ಪ್ರಚಾರದ ಕಣ ಕಂಗೇರಿದೆ. ಬಿಜೆಪಿ ಜೆಡಿಎಸ್ ಮೈತ್ರಿ ಅಭ್ಯರ್ಥಿಗಳು, ಕಾಂಗ್ರೆಸ್ ಅಭ್ಯರ್ಥಿಗಳ ಜೊತೆ ಪಕ್ಷೇತರ ಅಭ್ಯರ್ಥಿಗಳೂ ಕೂಡ ಭರ್ಜರಿ ಪ್ರಚಾರ ನಡೆಸುತ್ತಿದ್ದಾರೆ. ಈ ನಡುವೆ ಉಡುಪಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೋಟ ಶ್ರೀನಿವಾಸ್ ಪೂಜಾರಿ ಕೂಡ ಭರ್ಜರಿ ಮತ ಬೇಟೆ ನಡೆಸುತ್ತಿದ್ದಾರೆ. ಮಾಜಿ ಸಚಿವರಾಗಿ, ವಿಧಾನ ಪರಿಷತ್ ಸದಸ್ಯರಾಗಿ, ಹಾಲಿ ಬಿಜೆಪಿ ಅಭ್ಯರ್ಥಿಯಾಗಿರುವ ಕೋಟ ಶ್ರೀನಿವಾಸ್ ಪೂಜಾರಿಯವರು ಅಜಾತ ಶತ್ರು ಎಂದೇ ಕರೆಯಲ್ಪಡುತ್ತಾರೆ. ಸರಳ ಸಜ್ಜನಿಕೆಯ ರಾಜಕಾರಣಿ ಅಂತಾನೇ ಹೆಸರಾದ ಕೋಟ ಶ್ರೀನಿವಾಸ ಪೂಜಾರಿ ಅವರು ಬಿಜೆಪಿಯಲ್ಲಿದ್ದರೂ, ಅವರಿಗೆ ಬೇರೆ ಪಕ್ಷಗಳಲ್ಲೂ ಸ್ನೇಹಿತರು ಇದ್ದಾರೆ. ಇದೀಗ ಕೋಟ ಶ್ರೀನಿವಾಸ ಪೂಜಾರಿಯವರ ಚುನಾವಣಾ ಖರ್ಚಿಗೆ ಕಾಂಗ್ರೆಸ್ ತಾಲೂಕು ಅಧ್ಯಕ್ಷರೊಬ್ಬರು ಧನಸಹಾಯ ಮಾಡಿದ್ದಾರೆ!

ಹೌದು, ಇಂಥದ್ದೊಂದು ಅಪರೂಪದ ಘಟನೆಗೆ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಅಜ್ಜಂಪುರ ಸಾಕ್ಷಿಯಾಗಿದೆ. ಉಡುಪಿ ಚಿಕ್ಕಮಗಳೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೋಟ ಶ್ರೀನಿವಾಸ ಪೂಜಾರಿಯವರ ಚುನಾವಣೆ ಖರ್ಚಿಗೆ ತಾಲೂಕು ಕಾಂಗ್ರೆಸ್ ಅಧ್ಯಕ್ಷ ಧನಸಹಾಯ ಮಾಡಿದ್ದಾರೆ ಎನ್ನಲಾಗಿದೆ.

ಅಜ್ಜಂಪುರ ಕಾಂಗ್ರೆಸ್ ತಾಲೂಕು ಉಪಾಧ್ಯಕ್ಷ ಸೀತಾರಾಮ್ ಎಂಬುವರು ಕೋಟ ಶ್ರೀನಿವಾಸ ಪೂಜಾರಿಯವರಿಗೆ 25 ಸಾವಿರ ರೂಪಾಯಿ ಧನಸಹಾಯ ಮಾಡಿದ್ರು ಎನ್ನಲಾಗಿದೆ. ಅದನ್ನು ತಮ್ಮ ಚುನಾವಣಾ ಖರ್ಚಿಗೆ ಬಳಸಿಕೊಳ್ಳುವಂತೆ ಸೀತಾರಾಮ್ ಹೇಳಿದ್ದಾರೆ.

ಇನ್ನು ಸರಳ ಸಜ್ಜನಿಕೆಗೆ ಹೆಸರಾಗಿರೋ ಬಿಜೆಪಿ ಅಭ್ಯರ್ಥಿ ಕೋಟ ಶ್ರೀನಿವಾಸ ಪೂಜಾರಿಗೆ ಹಲವು ಪಕ್ಷದ ಮುಖಂಡರು, ಸಾರ್ವಜನಿಕರು ಧನಸಹಾಯ ಮಾಡುತ್ತಿದ್ದಾರೆ. ಬರೀ ಬಿಜೆಪಿ ಕಾರ್ಯಕರ್ತರಷ್ಟೇ ಅಲ್ಲದೇ, ಕಾಂಗ್ರೆಸ್ ಮುಖಂಡರು, ನಿವೃತ್ತ ಯೋಧರೂ ಕೂಡ ಚುನಾವಣಾ ಖರ್ಚಿಗಾಗಿ ಕೋಟ ಶ್ರೀನಿವಾಸ ಪೂಜಾರಿಯವರಿಗೆ ಹಣ ಸಹಾಯ ಮಾಡಿದ್ದಾರೆ.ಇನ್ನು ಪುರಸಭೆ ಮಾಜಿ ಸದಸ್ಯ ಮಿಲ್ಟ್ರಿ ಶ್ರೀನಿವಾಸ್ ಎಂಬುವರು ಕೋಟ ಶ್ರೀನಿವಾಸ ಪೂಜಾರಿಗೆ 25 ಸಾವಿರ ರೂಪಾಯಿ ಹಣ ಸಹಾಯ ಮಾಡಿದ್ದಾರೆ. ಇನ್ನು ಚಂದ್ರಪ್ಪ ಎಂಬುವರೂ ಕೂಡ 25 ಸಾವಿರ ಹಣ ಸಹಾಯ ಮಾಡಿದ್ದಾರೆ. ತರಿಕೆರೆಯಲ್ಲಿ ನಡೆದ ಬಿಜೆಪಿ ಸಮಾವೇಶದಲ್ಲಿ ಹಲವರು ಧನ ಸಹಾಯ ಮಾಡಿದ್ದಾರೆ.

# ಶ್ರೀಕ್ರೋಧಿನಾಮ ಸಂವತ್ಸರದ ಫಲ ಸಮ್ಮಿಶ್ರ ಪಂಡಿತ ಮಠಂ ಗುರುಪ್ರಸಾದ್



ಬಳ್ಳಾರಿ ಏ – ಕಾಲಚಕ್ರವು ಆರಂಭ ಸ್ಥಾನದಿಂದ ತಿರುಗುತ್ತಾ ಮರಳಿ ಆರಂಭಿಸಿದ ಸ್ಥಳಕ್ಕೆ ಬಂದ ಸುದಿನವೇ ಹೊಸದಿನ,ಸುದಿನ ಯುಗಾದಿ.ಯುಗಾದಿಯಂದು ಹೊಸವರ್ಷದ ಆಗು ಹೋಗುಗಳನ್ನು ತಿಳಿಯಲು ಪಂಚಾಂಗ ಒಂದು ಸಾಧನ.ಇದು ವರ್ಷದ ಪ್ರಕೃತಿ,ಜೀವ,ಜಗತ್ತಿನ ಆಗು ಹೋಗುಗಳನ್ನು ತಿಳಿಸುತ್ತದೆ.ತಿಥಿ,ವಾರ,ನಕ್ಷತ್ರ,ಯೋಗ ಮತ್ತು ಕರಣಗಳನ್ನು ಹೊಂದಿರುವುದೇ ಪಂಚಾಂಗ.ತಿಥಿಯು ಶ್ರೇಯಸ್ಸನ್ನು,ವಾರಗಳು ಆಯಸ್ಸನ್ನು,ನಕ್ಷತ್ರಗಳು ಪಾಪಪರಿ ಹಾರಕವನ್ನು,ಯೋಗವುರೋಗ ನಿವಾರಣೆ ಮತ್ತು ಕರಣಗಳು ಕಾರ್ಯಸಿದ್ಧಿ ಗೆ ಮಾರ್ಗದರ್ಶಿಗಳು ಎಂದು ಶ್ರೀಉಮಾ ಮಹೇಶ್ವರ ಪಂಚಾಂಗದ ಕರ್ತೃ ಪಂಡಿತ್ ಮಠಂ ಗುರುಪ್ರಸಾದರು ನುಡಿದರು.

ಶ್ರೀ ಕನಕ ದುರ್ಗಮ್ಮ ದೇವಸ್ಥಾನದಲ್ಲಿ ಕರ್ನಾಟಕಸರ್ಕಾರದ ಹಿಂದೂ ಧಾರ್ಮಿಕ ದತ್ತಿ ಇಲಾಖೆ,ಬಳ್ಳಾರಿ ಕಲ್ಚರಲ್ ಆಕ್ಟಿವಿಟೀಸ್ ಅಸೋಸಿಯೇಷನ್ ಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಪಂಚಾಂಗ ಪಠಣ ಕಾರ್ಯಕ್ರಮದಲ್ಲಿ ಪಂಚಾಂಗ ಪಠಣ ಮಾಡುತ್ತಾ 2024–2025 ನೇ ವರ್ಷವು ಸಮ್ಮಿಶ್ರ ಫಲಗಳನ್ನು ನೀಡುತ್ತಿದ್ದು,ಅತಿ ವೃಷ್ಟಿ,

ಅನಾವೃಷ್ಟಿ,ಭೂಕಂಪಗಳು ಉಂಟಾಗುತ್ತವೆ.ಬೆಲೆಗಳು ಹೆಚ್ಚಾಗುತ್ತವೆ.ಯುದ್ಧಗಳು ಸಂಭವಿಸಿ,ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅಶಾಂತಿ ತಲೆದೋರಲಿದೆ ಎಂದು ಮಠಂ ಗುರುಪ್ರಸಾದ್ ಹೇಳಿದರು.

ಶುಭ ಆಶೀರ್ವಾದ ನುಡಿಗಳೊಂದಿಗೆ ಕೊಕ್ಕರಚೇಡು ಶ್ರೀ ಶಂಕರಾನಂದ ಗಿರಿ ಗುರು ಸೇವಾಶ್ರಮದ ಮಾತಾಜಿ, ಶರಣಮ್ಮ ನವರು ಉಮಾಮಹೇಶ್ವರ ಪಂಚಾಂಗ ವನ್ನು ಲೋಕಾರ್ಪಣೆ ಮಾಡಿದರು.ಸಾನಿಧ್ಯ ವಹಿಸಿ ಮಾತನಾಡಿದ ಅವರು,ಭಾರತೀಯ ಪರಂಪರೆಯಲ್ಲಿ ಪಂಚಾಂಗ ಶ್ರವಣದಿಂದ ಶ್ರೇಯಸ್ಸು ಲಭಿಸುತ್ತದೆ.ಪ್ರತಿ ವ್ಯಕ್ತಿಯು ತನ್ನ ರಾಶಿ ಫಲವನ್ನು ತಿಳಿಯುವುದರಿಂದ ಜಾಗರೂಕತೆಯಿಂದ ಜೀವನ ಸಾಗಿಸಲು ಅನುಕೂಲ ವಾಗುವುದು.ಎಂದು ಹೇಳುತ್ತಾ ಸರ್ವರಿಗೂ ಶುಭ ಹಾರೈಸಿದರು.

ಬಳ್ಳಾರಿ ಕಲ್ಚರಲ್ ಆಕ್ಟಿವಿಟೀಸ್ ಅಸೋಸಿಯೇಷನ್ ನ ಅಧ್ಯಕ್ಷ ರಾದ ಶೀಲಾ ಬ್ರಹ್ಮಯ್ಯನವರು ಅತಿಥಿಗಳನ್ನು ಸನ್ಮಾನಿಸಿದರು.ಎಸ್.ಕೆ.ಆರ್.ಜೀಲನ್ ಬಾಷಾರ ಶ್ರೀಲಕ್ಷ್ಮೀ ಕಲಾ ಟ್ರಸ್ಟ್ ನ ವಿಧ್ಯಾರ್ಥಿನಿಯರು ನೃತ್ಯ ಪ್ರದರ್ಶನ ಮಾಡಿದರು.ಯಶವಂತ ರಾಜ್,ಗಾದೆಪ್ಪ,ಎಂ,ಟಿ,ಮಲ್ಲೇಶಪ್ಪ,ಡಾ!!ಮಹಿಪಾಲ್,ಸಿ,ಕೊಟ್ರಪ್ಪ, ರಾಮಚಂದ್ರ ಮುಂತಾದವರು ಉಪಸ್ಥಿತರಿದ್ದರು.ಕೆ.ಬಿ.ಸಿದ್ಧಲಿಂಗಪ್ಪ ಸ್ವಾಗತ ಕೋರಿ, ಕಾರ್ಯಕ್ರಮ ನಿರೂಪಿಸಿದರು.

## ಪಿಯುಸಿಯಲ್ಲಿ ವಿಜಯಪುರ 3 ನೇ ರ್‍ಯಾಂಕ್ : ಎಮ್.ಎಲ್. ಸಿ. ಹನುಮಂತ ನಿರಾಣಿ ಅಭಿನಂದನೆ

ವಿಜಯಪುರ : ಈ ಸಲದ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಒಟ್ಟಾರೆ ಶೇ. 94.89 % ಫಲಿತಾಂಶ ಸಾಧಿಸುವ ಮೂಲಕ ರಾಜ್ಯದಲ್ಲೇ ವಿಜಯಪುರ ಜಿಲ್ಲೆ ರ್‍ಯಾಂಕಿಂಗ್ ಪಟ್ಟಿಯಲ್ಲಿ 3 ನೇ ಸ್ಥಾನ ಗಿಟ್ಟಿಸಿಕೊಂಡಿದೆ. ಇದೊಂದು ಅಭೂತಪೂರ್ವ ಶೈಕ್ಷಣಿಕ ಸಾಧನೆಯಾಗಿದ್ದು, ಉತ್ತಮ ಫಲಿತಾಂಶ ಗಳಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ, ಜಿಲ್ಲೆ ಉನ್ನತ ಸ್ಥಾನಕ್ಕೇರಲು ಕಾರಣಿಕರ್ತರಾದ ಪಿಯು ಶಿಕ್ಷಣ ಇಲಾಖೆಯ



ಅಧಿಕಾರಿಗಳಿಗೆ, ಶಿಕ್ಷಕರಿಗೆ, ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಸದಸ್ಯರಿಗೆ ಹಾಗೂ ಶಿಕ್ಷಕರಿಗೆ ವಾಯುವ್ಯ ಪದವೀಧರ ಮತಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಹನುಮಂತ ನಿರಾಣಿ ಅವರು ತುಂಬು ಹೃದಯದ ಅಭಿನಂದನೆಗಳನ್ನು ತಿಳಿಸಿದ್ದಾರೆ. ಇದೇ ವೇಳೆ ಎಲ್ಲರ ಪರಿಶ್ರಮದಿಂದ ಮುಂದಿನ ದಿನಗಳಲ್ಲಿ ವಿಜಯಪುರ ಜಿಲ್ಲೆ ಶೈಕ್ಷಣಿಕವಾಗಿ ಇನ್ನಷ್ಟು ಉನ್ನತ ಸ್ಥಾನಕ್ಕೇರಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ಹೆಬ್ಬಾಳ್ಕರ್ ನಮ್ಮವರು: ನಿರಾಣಿಗೆ ಪ್ರತ್ಯುತ್ತರ ನೀಡಿದ ಶ್ರೀಗಳು

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಪಂಚಮಸಾಲಿ ಸಮಾಜದ ಮೀಸಲಾತಿ ಹೋರಾಟಕ್ಕೆ ಬೆಂಬಲಿಸಿ ಗುರುತಿಸಿಕೊಂಡಿದ್ದಾರೆ. ವಿನಾಕಾರಣ ವಿಷಯಾಂತರ ಮಾಡುವುದು ಸರಿಯಲ್ಲ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಶ್ರೀ ಬಸವಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುರುಗೇಶ ನಿರಾಣಿ ಅವರ ಪಕ್ಷ ಬೇರೆ ಇದ್ದರೂ ಜಾತಿ ಹೆಸರಿನಲ್ಲಿ ಈ ರೀತಿ ನೋವಾಗುವತರ ಮಾತನಾಡಬಾರದು. ನಿರಾಣಿ ಹಾಗೂ ಹೆಬ್ಬಾಳ್ಕರ್ ಒಂದೇ ತಾಯಿಯ ಮಕ್ಕಳು ಇದ್ದ ಹಾಗೆ ರಾಜಕೀಯ ವಿಷಯದಲ್ಲಿ ಬೇಕಾದನ್ನು ಮಾತನಾಡಿ, ಆದರೆ ಜಾತಿಯ ವಿಷಯ ತಂದು ನಮ್ಮ ನಮ್ಮಲ್ಲಿಯೇ ಜಗಳ ಹಚ್ಚುವುದು ಸರಿಯಲ್ಲ ಎಂದು ನಿರಾಣಿಗೆ ತಿಳಿಸಿದರು.

ಚುನಾವಣೆ ಬಳಿಕ ಮೀಸಲಾತಿ ಹೋರಾಟದ ರೂಪರೇಷೆ



ಸಿದ್ಧಪಡಿಸಲಾಗುವುದು. ಮೀಸಲಾತಿ ಹೋರಾಟಕ್ಕೆ ಸ್ಪಂದನೆ ಮಾಡದವರಿಗೆ ತಿರಸ್ಕಾರ ಮಾಡಿ, ಸಹಕಾರ ಕೊಟ್ಟವರಿಗೆ ಆಶೀರ್ವಾದ ಮಾಡಿ ಎಂದು ಪಂಚಮಸಾಲಿ ಸಮಾಜಕ್ಕೆ ಕರೆ ನೀಡಲಾಗಿದೆ ಎಂದರು.

ಪಂಚಮಸಾಲಿ ಸಮಾಜಕ್ಕೆ 2 ಮೀಸಲಾತಿ ನೀಡುವ ಕುರಿತು ಸಿಎಂ ಸಭೆ ಕರೆದಿದ್ದರು. ಆದರೆ ಇಲ್ಲಿಯವರೆಗೂ ಮೀಸಲಾತಿ ಕೊಡದೆ ಇರುವುದಕ್ಕೆ ನಮಗೆ ಅಸಮಾಧಾನ ಇದೆ ಎಂದರು.

ಪಂಚಮಸಾಲಿ ಸಮಾಜಕ್ಕೆ 2 ಮೀಸಲಾತಿ ನೀಡುವ ಕುರಿತು ಸಿಎಂ ಸಭೆ ಕರೆದಿದ್ದರು. ಆದರೆ ಇಲ್ಲಿಯವರೆಗೂ ಮೀಸಲಾತಿ ಕೊಡದೆ ಇರುವುದಕ್ಕೆ ನಮಗೆ ಅಸಮಾಧಾನ ಇದೆ ಎಂದರು.

## ಪ್ರಜಾಕೀಯ ಬೆಳಗಾವಿ ಲೋಕಸಭಾ ಅಭ್ಯರ್ಥಿ ಮಲ್ಲಪ್ಪ ಚೌಗಲಾ

ಬೆಳಗಾವಿ.ಬೆಳಗ್ಗೆ 9 ಗಂಟೆಯಿಂದ ಸಂಜೆ 7.00 ಗಂಟೆ ಯವರಗೆ ಎಂಪಿ ಕಾರ್ಮಿಕರ ನ್ನಾಗಿ ಕೆಲಸ ಮಾಡುತ್ತೇನೆ ಎಂದು ಉತ್ತಮ ಪ್ರಜಾಕೀಯ ಬೆಳಗಾವಿ ಲೋಕಸಭಾ ಅಭ್ಯರ್ಥಿ ಮಲ್ಲಪ್ಪ ಚೌಗಲಾ ಹೇಳಿದರು. ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ ಚುನಾವಣೆಯಲ್ಲಿ ಮತವನ್ನು ಯಾರೂ ಮಾರಾಟ ಮಾಡಬಾರದು, ಬೆಳಗಾವಿ ಲೋಕಸಭಾ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರದ ಜನರು ಸ್ವಲ್ಪ ಯೋಚಿಸಿ ಮತದಾನ ಮಾಡಬೇಕು, ನೀವು ಉತ್ತಮ ಪ್ರಜಾಕೀಯ ಅಭ್ಯರ್ಥಿ ಮತಹಾಕಿ ಗೆಲ್ಲಿಸಿದ್ದರೆ, 9 ಗಂಟೆಯಿಂದ ಸಂಜೆ 7.00 ಗಂಟೆ ಯವರಗೆ ಎಂಪಿ ಕಾರ್ಮಿಕನಾಗಿ ಕೆಲಸ ಮಾಡುತ್ತೇನೆ, ಪ್ರತಿಯೊಬ್ಬರು ಸಂಸದರನ್ನು ಹುಡುಕಿಕೊಂಡು ಪ್ರಸಂಗ ಬರುವುದಿಲ್ಲ, ಯಾ ವುದೇ ರೀತಿಯಲ್ಲಿ ಪಕ್ಷವು ಹಣ ಸಂಗ್ರಹಿಸುವುದಿಲ್ಲ, ಕಾರ್ಯ ಕರ್ತರು ಇಲ್ಲ.ಪ್ರಾದೇಶಿಕ ಕಛೇರಿಗಳಿಲ್ಲ ಎಂದು ಮಲ್ಲಪ್ಪ ಚೌಗಲಾ ಹೇಳಿದ್ದರು. ಸುದ್ದಿಗೋಷ್ಠಿಯಲ್ಲಿ ನೇಗಿಲ ಯೋಗಿ ರಾಜ್ಯ ರೈತ ಸಂಘ ರವಿ ಪಾಟೀಲ್, ನವೃತ್ತ ಅರಣ್ಯಾಧಿಕಾರಿ ಅಪ್ಪಣ್ಣ, ಶ್ರೀನವಾಸ ಸೇರಿ ಹಲವರು ಇದ್ದರು

# ಲೀಜ್ ಅಗ್ರಿಮೆಂಟ್‌ನ್ನು ರದ್ದುಗೊಳಿಸಿ ಎಕರೆ ಜಾಗವನ್ನು ಲಾರಿ ಮಾಲಿಕರ ಸಂಘಕ್ಕೆ ವಾಪಸ್ಸು ಕೊಡಿ : ಲಾರಿ ಮಾಲೀಕರಿಂದ ಒತ್ತಾಯ

ಬಳ್ಳಾರಿ, ಏ. : ನಗರದ ನಲ್ಲ ಚೆರವು ಪ್ರದೇಶದಲ್ಲಿ ಸರ್ ಎಂ.ವಿ ವಿಶ್ವೇಶ್ವರಯ್ಯ ಲಾರಿ ಟರ್ಮಿನಲ್‌ನಲ್ಲಿ ಲಾರಿಗಳ ತಂಗುದಾಣಕ್ಕಾಗಿ 1996ರಲ್ಲಿ ಸರ್ಕಾರದಿಂದ ಲಾರಿ ಮಾಲಿಕರ ಸಂಘಕ್ಕೆ ಮೂರು ಎಕರೆ ಜಾಗವನ್ನು ನೀಡಲಾಗಿತ್ತು. ಇದಕ್ಕೆ ಉತ್ತರವಾಗಿ 2 ಲಕ್ಷ 42 ಸಾವಿರ ರೂಪಾಯಿಗಳ ಮೊತ್ತವನ್ನು ಸಂಬಂದಿಸಿದ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಡಿ.ಡಿ ಮುಖಾಂತರ ಪಾವತಿ ಸಲಾಗಿತ್ತು.

ಅದು ಹೀಗೆ ಕಳೆದ ಹಲವಾರು ವರ್ಷಗಳಿಂದ ಲಾರಿ ಸಂಘವು ಲಾರಿಗಳನ್ನು ನಿಲ್ಲಿಸಲು ಉಪಯೋಗಿಸಲಾಗುತ್ತಿತ್ತು. ಆದರೆ ಮುನ್ನ ಎನ್ನುವ ವ್ಯಕ್ತಿ ಲಾರಿ ಸಂಘದ ಅಧ್ಯಕ್ಷರಾದ ಅವದಿಯಲ್ಲಿ ಸದರಿ ಮೂರು ಎಕರೆ ಜಾಗದಲ್ಲಿ 0.50 ಸೆಂಟ್ಸ್ (ಅರ್ಧ ಎಕರೆ) ಜಾಗವನ್ನು ಬಳ್ಳಾರಿ ಜಿಲ್ಲಾ ಸಾರಿಗೆ ನಿರ್ವಾಹಕ ಸಂಘಕ್ಕೆ 29 ವರ್ಷ 11 ತಿಂಗಳ ಅವದಿಗೆ ತಿಂಗಳಿಗೆ 25 ಸಾವಿರ ರೂಪಾಯಿಗಳ ಬಾಡಿಗೆ ಪ್ರಕಾರವಾಗಿ ಲೀಜ್‌ಗಾಗಿ ನೀಡಿರುತ್ತಾರೆ. ಯಾವುದೇ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ, ಪದಾಧಿಕಾರಿಗಳಿಗೆ ಮತ್ತು ಲಾರಿ ಮಾಲಿಕರ ಗಮನಕ್ಕಿಲ್ಲದೆ ಕೇವಲ ಮುನ್ನ ಎಂಬ ಅಧ್ಯಕ್ಷರ ಸ್ವಂತ ನಿರ್ಣಯದಿಂದ ಲೀಜ್‌ಗೆ ನೀಡಿರುತ್ತಾನೆ. ಇದರಿಂದ ಲಾರಿ ಟರ್ಮಿನಲ್‌ನಲ್ಲಿ ಲಾರಿಗಳನ್ನು ನಿಲ್ಲಿಸಲು ಸ್ಥಳದ ಕೊರತೆಯುಂಟಾಗಿರುತ್ತದೆ ಮತ್ತು ನಮ್ಮ ಸಂಘಕ್ಕೆ ಸರ್ಕಾರದಿಂದ (ಬುಡಾ ವತಿಯಿಂದ) ಮಂಜೂರು ಮಾಡುವ ಸಮಯದಲ್ಲಿ ಕೇವಲ ಇದನ್ನು ಲಾರಿಗಳ ಪಾರ್ಕಿಂಗ್ ಮಾತ್ರ ಉಪಯೋಗಿಸಬೇಕೆಂದು ಸ್ಪಷ್ಟವಾಗಿ ತಿಳಿಸಲಾಗಿರುತ್ತದೆ.

ಆದರೂ ಸಹ ಮುನ್ನಾ ಎಂಬ ಅಧ್ಯಕ್ಷರಾದ ಅವದಿಯಲ್ಲಿ ಅಕ್ರಮವಾಗಿ ಕಾನೂನು ಭಾಹೀರವಾಗಿ ಸದರಿ ಸ್ಥಳದಲ್ಲಿ (ಶ್ರೀಮತಿ ದೀಪ ಗಂಡ ಸುಗ್ರೀವಪ್ಪ ಎನ್ನುವವರಿಗೆ) ಲೀಜ್‌ಗೆ ನೀಡಿರುತ್ತಾರೆ. ಮತ್ತು ಡಿ ಶರಣಕುಮಾರ್ ತಂದೆ ದೇವಿಶೆಟ್ಟಿ ಪ್ರಕಾಶ್ ಆದೋನಿ ಇವರಿಗೆ ಸಹ 0.50 ಸೆಂಟ್ಸ್ ಜಾಗವನ್ನು ಮೇಲ್ಕಂಡ ಮೊತ್ತ ಮತ್ತು ಬಾಡಿಗೆ ಹಾಗೂ ಅವದಿಗೆ ಲೀಜ್‌ಗೆ ನೀಡಿರುತ್ತಾರೆ. ಕಾರಣ ಸದರಿ ಲೀಜ್ ಅಗ್ರಿಮೆಂಟ್‌ನ್ನು ರದ್ದುಗೊಳಿಸಿ ಒಂದು ಎಕರೆ ಜಾಗವನ್ನು ಸಂಪೂರ್ಣವಾಗಿ ಲಾರಿ ಮಾಲಿಕರ ಸಂಘಕ್ಕೆ ವಾಪಸ್ಸು ಕೊಡಿ ಎಂದು ಒತ್ತಾಯಿಸುತ್ತಿದ್ದೇವೆ.

ಬೇಡಿಕೆಗಳು:–

1. ಲಾರಿಗಳು ಹಗಲು ಹೊತ್ತಿನಲ್ಲಿ ಬಳ್ಳಾರಿ ನಗರಕ್ಕೆ ಪ್ರವೇಶವನ್ನು ಪೊಲೀಸರು ನಿರಾಕರಿಸಿದ್ದಾರೆ. ಇದರಿಂದ ನಮ್ಮ ಲಾರಿಗಳನ್ನು ಓಡಾಡಿಸುವುದು ತೊಂದರೆ ಯಾಗುತ್ತಿದೆ.
2. ಸರ್ಕಾರದಿಂದ ಮಂಜೂರಾದ ಅನಂತಪುರ ರಸ್ತೆಯಿಂದ ಸಿರುಗುಪ್ಪ ರಸ್ತೆಯ ಮೂಲಕ ಹೊಸಪೇಟೆ ಎನ್ ಎಚ್ ರಸ್ತೆಗೆ ಸಂಪರ್ಕ ಕಲ್ಪಿಸಬೇಕು.
3. ಲಾರಿ ತಂಗುದಾಣಕ್ಕೆ ಬೈಪಾಸ್ ರಸ್ತೆಯ ಆಲದಹಳ್ಳಿ ಅಥವಾ ಮುಂಡರಗಿ ಪ್ರದೇಶದಲ್ಲಿ ಸ್ಥಳವನ್ನು ಮಂಜೂರು ಮಾಡಬೇಕು ಇದರಿಂದ ಲಾರಿಗಳು ಹೊರಗೆ ತಿರುಗಾಡಲು ಅನುಕೂಲಾವಾಗುತದೆ.
4. ಪ್ರತಿ ಲಾರಿ ಡ್ರೈವರ್ ಕುಟುಂಬಕ್ಕೆ ಇನ್ಸೂರೇನ್ಸ್ ಮತ್ತು ಸರ್ಕಾರದಿಂದ ವಿವಿಧ ಸಹಾಯವನ್ನು ನಿಡಬೇಕು.
5. ನಗರದ ಸುತ್ತ ಮುತ್ತಲಿರುವ ಕಾರ್ಖಾನೆಗಳು ಸ್ಥಳೀಯ ಲಾರಿಗಳಿಗೆ ಪ್ರಾದಾನ್ಯತೆ ಯನ್ನು ನೀಡಬೇಕು.

ಈ ಸಂದರ್ಭದಲ್ಲಿ ಲಾರಿ ಮಾಲಿಕರು ಹಾಗೂ ಟಿಪ್ಪರ್ ಅಸೋಸಿಯೇಷನ್ ಕಾರ್ಯದರ್ಶಿ ಮಹಾಬೂಬಾಷಾ, ಲಾರಿ ಮಾಲಿಕರಾದ ನಾಗರಾಜ್, ಡಿ. ರಾಮ್ ಕುಮಾರ್, ನೀಲಕಂಠೇಶ್ವರ ನಾಯ್ಡು, ಪ್ರವೀಣ್ ಕುಮಾರ್, ಶ್ರೀನಿವಾಸಲು ಉಪಸ್ಥಿತರಿದ್ದರು.




## ಎಸ್.ಎಸ್.ಎಲ್.ಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕೇಂದ್ರಗಳ ಸುತ್ತ–ಮುತ್ತ ನಿಷೇಧಾಜ್ಞೆ

ಬೆಳಗಾವಿ,ಏ.: ಎಸ್.ಎಸ್.ಎಲ್.ಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕೇಂದ್ರಗಳ ಸುತ್ತಲೂ 100 ಮೀಟರ್ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ನಗರದ ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿ ಮತ್ತು ಪೊಲೀಸ್ ಆಯುಕರಾದ ಯಡಾ ಮಾರ್ಟಿನ್ ಮಾರ್ಬನ್ಯಾಂಗ ಅವರು ಆದೇಶ ಹೊರಡಿಸಿರುತ್ತಾರೆ.

ನಗರದ 8 ಮೌಲ್ಯಮಾಪನ ಕೇಂದ್ರಗಳ ಸುತ್ತಲು 100 ಮೀಟರ್ ವ್ಯಾಪ್ತಿಯಲ್ಲಿ ಸಾರ್ವಜನಕರು ಗುಂಪು–ಗುಂಪಾಗಿ ಸೇರುವದನ್ನು ನಷೇಧಿಸಿದೆ.

ಏ. 8 ರಿಂದ 25 ವರೆಗೆ ಬೆಳಗಾವಿ ನಗರದ ಮೌಲ್ಯ ಮಾಪನ ಕೇಂದ್ರಗಳ ಸುತ್ತಲೂ ಜಾರಿಗೆ ನಷೇಧಾಜ್ಞೆ ಜಾರಿಯಲ್ಲಿದ್ದು, ಸದರಿ ಆಜ್ಞೆಯನ್ನು ಉಲ್ಲಂಘಿಸಿದವರ ವಿರುದ್ಧ ಕಲಂ 188 ಭಾರತೀಯ ದಂಡ ಸಂಹಿತೆ ಪ್ರಕಾರ ಕ್ರಮ ಜರುಗಿಸಲಾಗುವುದು ಎಂದು ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಕಾರಿಗಳು ಮತ್ತು ನಗರ ಪೊಲೀಸ್ ಆಯುಕ್ತರಾದ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.